KACB010021122023

# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ</u>

## ಸ್ಪೆಷಲ್ ಕೇಸ್ ನಂ. 99/2023

ಫಿರ್ಯಾದಿಃ ಸರ್ಕಾರ – ಕೆಂಚಾರ್ಲಹಳ್ಳಿ ಪೊಲೀಸ್ ಠಾಣೆ

ವಿರುದ್ಧ

ಆರೋಪಿಃ ಪ್ರಮೀಳಮ್ಮ ಕೋಂ ಲೇಟ್ ರಾಮಣ್ಣ

## <u>ದೋಷಾರೋಪಣೆ</u>

ಶ್ರೀಮತಿ ಎನ್.ವಿ.ಭವಾನಿ, ಬಿ.ಎ. ಎಲ್.ಎಲ್.ಬಿ. ಹಾನರ್ಸ್ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿಕ್ಕಬಳ್ಳಾಪುರ, ಆದ ನಾನು

ಪ್ರಮೀಳಮ್ಮ , ಗಂಡಃ ಲೇಟ್ ರಾಮಣ್ಣ
ವಯಸ್ಸು 55 ವರ್ಷ, ವಾಸಃ ಮುರುಗಮಲ್ಲ ಗ್ರಾಮ,
ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.

ನಿಮ್ಮ ವಿರುದ್ಧ ಆಪಾದಿಸುವುದೇನೆಂದರೆಃ

ದಿನಾಂಕ 16.08.2023 ರಂದು ಮಧ್ಯಾಹ್ನ 12.30 ಗಂಟೆಗೆ ಚಾಸಾ–1 ರವರು ತಮ್ಮ ಸಿಬ್ಬಂದಿಗಳಾದ ಚಾಸಾ–5 ರಿಂದ 8 ರವರೊಂದಿಗೆ ಸರ್ಕಾರಿ ಜೀಪಿನಲ್ಲಿ ಕೆಂಚಾರ್ಲಹಳ್ಳಿ ಪೊಲೀಸ್ ಠಾಣಾ ಸರಹದ್ದು, ಮುರುಗಮಲ್ಲ ಗಾರಮದಲ್ಲಿ ಗಸ್ತು ಮಾಡುತ್ತಿದ್ದಾಗ, ಮುರುಗಮಲ್ಲ ಗ್ರಾಮದ ಸರ್ಕಾರಿ ಆಸ್ಪತ್ರೆಯ ಬಳಿ ವಾಸಿಯಾದ ನಿಮ್ಮ ವಾಸದ ಮನೆಯ ಕಾಂಪೌಂಡ್ ಆವರಣದಲ್ಲಿ ಕಾನೂನು ಬಾಹಿರವಾಗಿ ಸಾರ್ವಜನಿಕರಿಗೆ ಮಾದಕ ವಸ್ತುವಾದ ಗಾಂಜಾವನ್ನು ಮಾರಾಟ ಮಾಡುವ ಉದ್ದೇಶದಿಂದ 5 ಸಂಖ್ಯೆ ಗಾಂಜಾ ಗಿಡಗಳನ್ನು ಬೆಳೆಸಿದ್ದು, ಸದರಿ 5 ಗಿಡಗಳ ಒಟ್ಟು ತೂಕ

11 ಕೆಜಿ 400 ಗ್ರಾಮ್ ಅಗಿದ್ದು, ಸುಮಾರು ರೂ.66,000/- ಮೌಲ್ಯದ ಹಸಿ ಗಾಂಜಾ ಸಸಿಗಳೊಂದಿಗೆ ಚಾಸಾ -1 ರವರು, ಚಾಸಾ-2 ರಿಂದ 4 ರವರೊಂದಿಗೆ ದಾಳಿ ಮಾಡಿದಾಗ ಸಿಕ್ಕಿಬಿದ್ದಿರುತ್ತೀರಿ. ಈ ಮೂಲಕ ನೀವು ಎನ್.ಡಿ.ಪಿ.ಎಸ್. ಕಾಯ್ದೆ 1985 ರ 20(a) (b) ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ : 25 ನೇ ಸೆಪ್ಟೆಂಬರ್ 2024.

( ಎನ್.ವಿ. ಭವಾನಿ )
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**